ನಂ:ಇಎಲ್ಎನ್(ಪಂ)ಸಿಆರ್:28/09-10

ಜಿಲ್ಲಾಧಿಕಾರಿಯವರ ಕಾರ್ಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ,
ಬೆಂಗಳೂರು, ದಿನಾಂಕ:05-02-2010.

## ಟೆಂಡರ್ ಪ್ರಕಟಣೆ

ವಿಷಯ: ಗ್ರಾಮ ಪಂಚಾಯಿತಿಗಳ ಸಾರ್ವತ್ರಿಕ ಚುನಾವಣೆ-2010
ಮತದಾರರ ಪಟ್ಟಿ ಮುದ್ರಣ ಕಾರ್ಯ ಕೈಗೊಳ್ಳುವ ಬಗ್ಗೆ.

ಉಲ್ಲೇಖ: ರಾಜ್ಯ ಚುನಾವಣಾ ಆಯೋಗದ ಸುತ್ತೋಲೆ ಸಂ:
ರಾಚುಆ/05/ಇಜಿಪಿ/2010, ದಿನಾಂಕ 28-01-2010.

ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳ ಕ್ಷೇತ್ರವಾರು ಮತದಾರರ ಪಟ್ಟಿಗಳನ್ನು ಚಾಲ್ತಿಯಲ್ಲಿರುವ ವಿಧಾನಸಭಾ ಕ್ಷೇತ್ರಗಳ ಮತದಾರರ ಪಟ್ಟಿಗಳ ಡಾಟಾವನ್ನು ಬಳಸಿಕೊಂಡು ಸಿದ್ದಪಡಿಸ ಬೇಕಾಗಿರುತ್ತದೆ. ಗ್ರಾಮ ಪಂಚಾಯಿತಿಗಳ ಸಾರ್ವತ್ರಿಕ ಚುನಾವಣೆ-2010ರ ಪ್ರಯುಕ್ತ ರಾಜ್ಯ ಚುನಾವಣಾ ಆಯೋಗವು ಉಲ್ಲೇಖಿತ ಸುತ್ತೋಲೆಯಲ್ಲಿ ನೀಡಿರುವ ಸೂಚನೆಗಳಂತೆ ಈ ಜಿಲ್ಲೆಯ ಗ್ರಾಮ ಪಂಚಾಯಿತಿಗಳ ಕ್ಷೇತ್ರವಾರು ಮತದಾರರ ಪಟ್ಟಿಗಳನ್ನು ಮುದ್ರಣ ಮಾಡಿ ನೀಡಲು ಅನುಭವ ಹೊಂದಿರುವ ಮುದ್ರಣ ಸಂಸ್ಥೆಗಳಿಂದ ಟೆಂಡರನ್ನು ಕರೆಯಲಾಗಿದೆ. ಟೆಂಡರ್ ನಮೂನೆಯು ಚುನಾವಣೆ ತಹಸೀಲ್ದಾರ್, ಜಿಲ್ಲಾಧಿಕಾರಿಯವರ ಕಛೇರಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ:ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು-1 ಇವರಲ್ಲಿ ಲಭ್ಯವಿರುತ್ತದೆ. ರೂ.500/-ಗಳನ್ನು ಪಾವತಿಸಿ, ಟೆಂಡರ್ ಫಾರಂಗಳನ್ನು ಖರೀದಿಸಬಹುದಾಗಿದೆ. ಆಸಕ್ತಿಯುಳ್ಳ ಟೆಂಡರ್‌ದಾರರು ರೂ.50000/-ಗಳ ಇ.ಎಂ.ಡಿ. ಮೊಬಲಗಿನೊಂದಿಗೆ ಟೆಕ್ನಿಕಲ್ ಮತ್ತು ಕಮರ್ಷಿಯಲ್ ಬಿಡ್ ವಿವರದ ಮೊಹರಾದ ಎರಡು ಪ್ರತ್ಯೇಕ ಲಕೋಟೆಗಳ ಸ್ವರೂಪದಲ್ಲಿ ಟೆಂಡರನ್ನು ದಿನಾಂಕ:15-02-2010ರ ಸಂಜೆ 3-00 ಗಂಟೆ ಯೊಳಗಾಗಿ ಸಲ್ಲಿಸಬಹುದಾಗಿರುತ್ತದೆ. ಈ ಸಂಬಂಧ ಹೆಚ್ಚಿನ ಮಾಹಿತಿಯ ಅವಶ್ಯಕತೆಯಿದ್ದಲ್ಲಿ, ಈ ಕಛೇರಿಯ ಚುನಾವಣಾ ತಹಸೀಲ್ದಾರ್ ರವರನ್ನು ಸಂಪರ್ಕಿಸಿ ಪಡೆಯಬಹುದಾಗಿದೆ.

ಜಿಲ್ಲಾಧಿಕಾರಿ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.